# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 | ENGLISH DAILY | Subscription Yearly - Rs. - | TUESDAY | 16-8-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಕಾಫಿ ದರ ಹೆಚ್ಚಳ, ಭಾರತದಿಂದ ಹೆಚ್ಚಿನ ರಫ್ತು ಸಾಧ್ಯತೆ

ಬಿಗು ಪೂರೈಕೆಯಿಂದ ಅರೆಬಿಕಾ ಹಾಗೂ ರಾಬೆಸ್ಟಾ ಕಾಫಿಯ ಅಂತರಾಷ್ಟ್ರೀಯ ದರಗಳು ಹೆಚ್ಚಳ ದಾಖಲಿಸಿವೆ. ವಿಯೆಟ್ನಾಂನ ರಾಬೆಸ್ಟಾ ಕಾಫಿ ಉತ್ಪಾದನೆ ಇಳಿಕೆಯ ಸಾಧ್ಯತೆಯಿಂದ ಹಾಗೂ ಬ್ರೆಜಿಲ್‌ನಲ್ಲಿಯೂ ಅಂದಾಜಿಗಿಂತ ಕಡಿಮೆ ಅರೆಬಿಕಾ ಕಾಫಿ ಉತ್ಪಾದನೆಯ ಸಾಧ್ಯತೆಗಳಿಂದ ಪೂರೈಕೆ ಬಿಗುವಿನಿಂದ ಕೂಡಿದೆ. ಇತರ ಕಾಫಿ ಬೆಳೆಯುವ ದೇಶಗಳಿಗೆ ಹೋಲಿಸಿದರೆ ಭಾರತದ ಉತ್ಪಾದನೆ ಉತ್ತಮವಾಗಿರಲಿದೆಯೆನ್ನಲಾಗಿದೆ. ಭಾರತದಲ್ಲಿ ಹಿಂದಿನ ಅಂದಾಜಿಗಿಂತ ಹೆಚ್ಚು ಉತ್ಪಾದನೆಯ ಅಂದಾಜು ಮಾಡಲಾಗಿದ್ದು ರಾಬೆಸ್ಟಾ 277000 ಟನ್ ಹಾಗೂ ಅರೆಬಿಕಾ 116,400 ಟನ್‌ಗಳು ಉತ್ಪಾದನೆಯಾಗಬಹುದೆನ್ನಲಾಗಿದೆ. ಬ್ರೆಜಿಲ್‌ನ ಉತ್ಪಾದನೆ ಹಿಂದಿನ ವರ್ಷಕ್ಕಿಂತ ಹೆಚ್ಚಳವಾಗಬಹುದಾದರೂ ದಾಖಲೆ ಉತ್ಪಾದನೆಗಿಂತ ಬಹಳ ಹಿಂದೆಯೇ ಇರಲಿದೆಯೆನ್ನಲಾಗಿದೆ. ವಿಯೆಟ್ನಾಂನಲ್ಲಿ ರಾಬೆಸ್ಟಾ ಕಾಫಿ ಉತ್ಪಾದನೆ ಹಿಂದಿನ ವರ್ಷಕ್ಕೆ 700000 ಚೀಲ ಇಳಿಕೆಯಾಗಲಿದೆಯೆನ್ನಲಾಗಿದ್ದು, ಒಟ್ಟು 30.9 ಮಿಲಿಯನ್ ಚೀಲಗಳಾಗಬಹುದೆನಗನಲಾಗಿದೆ. ಜನವರಿಯಿಂದ ಆಗಷ್ಟ್ 9 ರ ತನಕದ ಭಾರತದಿಂದ ಕಾಫಿ ರಫ್ತು 264191 ಟನ್‌ಗಳಿಗೇರಿದ್ದು, 16 ಶೇಕಡಾ ಹೆಚ್ಚಳವಾಗಿದೆ. ಹಿಂದಿನ ವರ್ಷ 2021 ರಲ್ಲಿ ಭಾರತದಿಂದ 394,343 ಟನ್ ಕಾಫಿ ರಫ್ತಾಗಿದ್ದು, 2017 ರ 378,909 ಟನ್ ರಫ್ತಿನ ದಾಖಲೆ ಮೀರಿ ಹೊಸ ದಾಖಲೆ ಮಾಡಿದೆ. ಯುರೋಪ್, ಜರ್ಮನಿ, ಇಟೆಲಿ ಹಾಗೂ ಬೆಲ್ಜಿಯಂ ಗಳಿಂದ ಭಾರತದ ಕಾಫಿಗೆ ಉತ್ತಮ ಬೇಡಿಕೆಯಿದೆಯೆನ್ನಲಾಗಿದೆ. ಇದರ ಹೊರತಾಗಿ ಮಧ್ಯ ಪೂರ್ವ ಹಾಗೂ ಉತ್ತರ ಈಶಾನ್ಯ ಆಫ್ರಿಕಾ ದಿಂದಲೂ ಬೇಡಿಕೆ ಹೆಚ್ಚಳವಿದೆಯೆನ್ನಲಾಗಿದೆ. ಭಾರತದಿಂದ ಸಾಗಾಣಿಕೆ ವೆಚ್ಚ ಇತರ ದೇಶಗಳಿಂದ ಹೋಲಿಸಿದರೆ ಕಡಿಮೆಯಿದೆಯೆನ್ನಲಾಗಿದೆ. ಇದರಿಂದ ಭಾರತದಿಂದ ಕಾಫಿ ರಫ್ತು ಹೆಚ್ಚಳಕ್ಕೆ ಉತ್ತಮ ಅವಕಾಶಗಳಿವೆಯೆನ್ನಲಾಗಿದೆ.

## ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಇಳಿಕೆ

ಆರು ವಾರಗಳ ಗರಿಷ್ಠ ಮಟ್ಟದಿಂದ ಮಲೇಶಿಯನ್ ಪಾಮೆಣ್ಣೆ ದರ ದಿಡೀರ್ ಕುಸಿತ ಕಂಡಿದೆ. ಚೀನಾದಿಂದ ಬೇಡಿಕೆ ಇಳಿಕೆಯ ಸಾಧ್ಯತೆ ,ಸೋಯಾ ಎಣ್ಣೆ ದರ ಇಳಿಕೆ, ಅಮೇರಿಕಾದಲ್ಲಿ ದಾಖಲೆ ಸೋಯಾ ಉತ್ಪಾದನೆಯ USDA ಪ್ರಕಟಣೆ ಮುಂತಾದ ಕಾರಣಗಳಿಂದ ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ 6.7 ಶೇಕಡಾ ಕುಸಿತಕ್ಕೊಳಗಾಗಿದೆ. ಮಲೇಶಿಯಾದಲ್ಲಿ ಪಾಮೆಣ್ಣೆ ದಾಸ್ತಾನು ಹಾಗೂ ಉತ್ಪಾದನೆ ಹೆಚ್ಚಳವಾಗುವ ಸಾಧ್ಯತೆಯಿದೆ. ನಿನ್ನೆ ಕುಸಿತಗೊಂಡ ಬಳಿಕ ಇಂದು 16/8/2022 ರಂದು ಮಲೇಶೀಯನ್ ಪಾಮೆಣ್ಣೆ ನವೆಂಬರ್ ಫ್ಯೂಚರ್ ದರ 3.12 ಶೇಕಡಾ ಪ್ರಗತಿ ಕಂಡಿದೆಯೆನ್ನಲಾಗಿದೆ. ಆಗಷ್ಟ್ 1–15 ರ ತನಕ ಮಲೇಶಿಯನ್  ಪಾಮೆಣ್ಣೆ ಉತ್ಪನ್ನಗಳ ರಫ್ತು 9.5 ಶೇಕಡಾ ಇಳಿಕೆಯಾಗಿ 516072 ಟನ್‌ಗಳಿಗೆ ಇಳಿಕೆಯಾಗಿದೆಯೆಂದು ಕಾರ್ಗೋ ಸರ್ವೇಯರ್ SGS ಪ್ರಕಟಣೆ ತಿಳಿಸಿದೆ.